# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗುಣಮಟ್ಟ ಖಾತ್ರಿ ಉತ್ತೇಜಕಗಳು–ಆಡಳಿತಾತ್ಮಕ ಅನುಮೋದನೆ

ಉಲ್ಲೇಖ: 1. ಸರ್ಕಾರದ ಆದೇಶ: ಇಡಿ 77 ಮಾಹಿತಿ 2016 ಬೆಂಗಳೂರು ದಿನಾಂಕ:30.07.2016

2. ಸರ್ಕಾರದ ಆದೇಶ: ಇಡಿ 79 ಮಾಹಿತಿ 2016 ಬೆಂಗಳೂರು ದಿನಾಂಕ:22.07.2016

**ಪೀಠಿಕೆ :**

1. "ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬುದು ನೀತಿ ಗುರಿ. ಸರ್ಕಾರಿ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೊಳಿಸುವ ನಿಟ್ಟಿನಲ್ಲಿ ಹಲವಾರು ವರ್ಷಗಳಿಂದ ಅನೇಕ ಉಪಕ್ರಮಗಳನ್ನು ಜಾರಿಗೊಳಿಸಿದೆ. ಸದರಿ ಉಪಕ್ರಮಗಳು ಉತ್ತಮ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದ್ದರೂ, ಪ್ರಾಯೋಗಿಕ(Pilot) ಅನುಷ್ಠಾನ ಹಂತದಲ್ಲಿ ಯಶಸ್ಸು ದೊರಕಿದ್ದರೂ ಸಹ ವ್ಯಾಪ್ತಿಯನ್ನು ವಿಸ್ತರಿಸಿದ ಹಂತದಲ್ಲಿ ಅಪೇಕ್ಷಿತ ಯಶಸ್ಸು ದೊರಕಿರುವುದಿಲ್ಲ. ಈ ಉಪಕ್ರಮಗಳು, ಉಸ್ತುವಾರಿ, ಮೌಲ್ಯಮಾಪನ ಹಾಗೂ ಹಿಮ್ಮಾಹಿತಿಯನ್ನಾಧರಿಸಿ ಕಾರ್ಯಕ್ರಮಗಳ ಸುಧಾರಣೆಯನ್ನು ಒಳಗೊಂಡಂತೆ; ಚಟುವಟಿಕೆಗಳ ಅನುಷ್ಠಾನ ಪ್ರಕ್ರಿಯೆಯಲ್ಲಿನ ಅಸಮರ್ಪಕ ನಿರ್ವಹಣೆಯು ಉಪಕ್ರಮಗಳ ವಿಫಲತೆಗೆ ಪ್ರಮುಖ ಕಾರಣವಾಗಿರುತ್ತದೆ. ಪ್ರಕ್ರಿಯೆಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳ ಅನುಪಸ್ಥಿತಿಯಲ್ಲಿ ಕೇವಲ ಒಳಹರಿವು (Inputs)ಗಳ ಪೂರೈಕೆಯು ಕಡಿಮೆ ಗುಣಮಟ್ಟದ ಶಿಕ್ಷಣ ಮುಂದುವರಿಕೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಗುಣಮಟ್ಟದ ಭರವಸೆಯನ್ನು ಖಚಿತಪಡಿಸುವ ವ್ಯವಸ್ಥೆಯನ್ನು ಸ್ಥಾಪಿಸುವ ಅಗತ್ಯವಿರುತ್ತದೆ.

2. ಉತ್ತಮ ಕಲಿಕಾ ಗುಣಮಟ್ಟ ಖಾತ್ರಿಪಡಿಸಿಕೊಳ್ಳಲು ಕಲಿಕಾ ಸಾಧನೆಗಳ ವಸ್ತುನಿಷ್ಠ ಮೌಲ್ಯಮಾಪನ ಅತ್ಯಗತ್ಯವಾಗಿದೆ. ಇಂತಹ ವಸ್ತುನಿಷ್ಠ ಮೌಲ್ಯಮಾಪನಗಳನ್ನು ಮೇಲಸ್ತರದ(Macro level) ಆಡಳಿತ ಘಟಕಗಳಾದ ತಾಲ್ಲೂಕು ಅಥವಾ ಜಿಲ್ಲಾ ಹಂತದಲ್ಲಿ ನಡೆಸಿದಾಗ, ಶಿಕ್ಷಕರ ತರಬೇತಿ ಕಾರ್ಯಕ್ರಮಗಳಿಗೆ ಅರ್ಥಪೂರ್ಣ (Inputs) ಒಳಹರಿವುಗಳನ್ನು ಪೂರೈಸಲು ಸಹಾಯಕವಾಗುವುದು. ಇಂತಹ ವಸ್ತುನಿಷ್ಠ

ಮೌಲ್ಯಮಾಪನಗಳು ವಿದ್ಯಾರ್ಥಿ ಹಂತದಲ್ಲಿಯೂ ಸಹ ಅಳವಡಿಸಿದಲ್ಲಿ, ಕಲಿಕೆಯಲ್ಲಿ ಕಡಿಮೆ ಸಾಧನೆ ಗಳಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಪೂರಕ ಬೋಧನೆ ಆಯೋಜಿಸಬಹುದಾಗಿದೆ.

3. ಉತ್ತಮ ಕಲಿಕೆ ಎಂಬ ನೀತಿ ಗುರಿಯನ್ನು ಸಾಧಿಸಲು ಯೋಜಿತ ಕಲಿಕಾ ಪ್ರಕ್ರಿಯೆಗಳನ್ನು ಶಾಲೆಯಲ್ಲಿ ಸತತವಾಗಿ ಅಳವಡಿಸುವ ಅಗತ್ಯವಿದ್ದು, ಇದರಿಂದ ಬೋಧನೆಗಳಲ್ಲಿನ ನ್ಯೂನತೆಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ನೀಡಬಹುದಾಗಿದೆ.

4. 2016-17ನೇ ಸಾಲಿನ ಆಯವ್ಯಯ ಮಂಡನೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆಯ ಯೋಜನೆಗಳನ್ನು ತಾರ್ಕಿವಾಗಿ ಸಮನ್ವಯಗೊಳಿಸಿ 05 ಹೊಸ ಕಾರ್ಯಕ್ರಮಗಳ ಮೂಲಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು ಕ್ರಮವಹಿಸಿದೆ. ಸದರಿ 05 ಕಾರ್ಯಕ್ರಮಗಳಲ್ಲಿ "ಗುಣಮಟ್ಟ ಖಾತ್ರಿ ಉತ್ತೇಜಕಗಳು" (Quality Assurance Initiatives) ಕಾರ್ಯಕ್ರಮವು ಹೊಸ ಹಾಗೂ ಪ್ರಸ್ತುತ ಜಾರಿಯಲ್ಲಿರುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

5. ಗುಣಮಟ್ಟ ಖಾತ್ರಿ ಉಪಕ್ರಮಗಳ ಉದ್ದೇಶವು, ಶೈಕ್ಷಣಿಕ ವಲಯಗಳ ಒಟ್ಟಾರೆ ಸನ್ನಿವೇಶದ ಚಿತ್ರಗಳನ್ನು ನೀಡುವ ಬದಲಾಗಿ ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಗಳಿಗೆ ಸೂಚಿಸುವ ಪರಿಹಾರಾತ್ಮಕ ಕ್ರಮಗಳಿಗೆ ಅನುಷ್ಠಾನಗೊಳಿಸಬಲ್ಲ ಒಳಹರಿವುಗಳನ್ನು ನೀಡುವುದಾಗಿದೆ. ಸದರಿ ಕಾರ್ಯಕ್ರಮಗಳಲ್ಲಿ ಸೂಚಿಸಲಾಗಿರುವ ಚಟುವಟಿಕೆಗಳ ಗುರಿಯು ವಲಯದ ಯೋಜನೆ ಬದಲಾಗಿ ಪ್ರಕ್ರಿಯೆಗಳ ಕ್ರಿಯಾತ್ಮಕ ನಿರ್ವಹಣೆ ಮಾಡುವುದಾಗಿದೆ.

6. ಕಾರ್ಯಕ್ರಮ ಹಾಗೂ ಅದರ ಚಟುವಟಿಕೆಗಳನ್ನು ಸರ್ಕಾರದ ಸಕ್ಷಮ ಪ್ರಾಧಿಕಾರವು ಪರಿಗಣಿಸಿ ಅನುಮೋದನೆ ನೀಡಿದ ಪ್ರಯುಕ್ತ, ಗುಣಮಟ್ಟ ಖಾತ್ರಿ ಉತ್ತೇಜಕಗಳ ಅನುಷ್ಠಾನಕ್ಕಾಗಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 78 ಮಾಹಿತಿ 2016, ಬೆಂಗಳೂರು ದಿನಾಂಕ: 4-08-2016**

1. "ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬ ನೀತಿ ಗುರಿಯನ್ನು ಸಾಧಿಸಲು ಗುಣಮಟ್ಟ ಖಾತ್ರಿ ಉತ್ತೇಜಕಗಳ ಭಾಗವಾಗಿ ಕೆಳಗಿನ ಚಟುವಟಿಕೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

i. ಕೆ.ಎಸ್.ಕ್ಯೂ.ಎ.ಎ.ಸಿ.ಯ ಕಾರ್ಯಚಟುವಟಿಕೆಗಳನ್ನು ಪುನರಚಿಸುವುದು (Referring mandate & functioning of KSQAAC)

ii. ರಾಜ್ಯ ಸಾಧನಾ ಸಮೀಕ್ಷೆ (State Achievement Survey)

iii. ವಿದ್ಯಾರ್ಥಿಗಳ ಸಾಧನೆಗಳ ಬಾಹ್ಯ ಮೌಲ್ಯಮಾಪನ (External Evaluation of achievements of students)

iv. ಪ್ರಕ್ರಿಯೆಗಳಿಗಾಗಿ ಗುಣಮಟ್ಟ ಖಾತ್ರಿ (Quality assurance for processes)

2. ಮೇಲಿನ ಚಟುವಟಿಕೆಗಳ ವ್ಯಾಪ್ತಿ ಹಾಗೂ ಅವುಗಳ ಅನುಷ್ಠಾನದ ಜವಾಬ್ದಾರಿಗಳ ವಿವರಗಳನ್ನು ಈ ಸರ್ಕಾರದ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

3. ಸಂಬಂಧಿಸಿದ ಅನುಷ್ಠಾನಾಧಿಕಾರಿಗಳು ಪ್ರತಿ ಚಟುವಟಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

4. ನಿರ್ದಿಷ್ಟ ಚಟುವಟಿಕೆಗೆ ಅನುಮೋದಿತ ಕ್ರಿಯಾ ಯೋಜನೆಗಳಿಗೆ ಅನುದಾನದ ಬಿಡುಗಡೆ ಸಂಬಂಧ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸದರಿ ಉಪಕ್ರಮದ ಮುಖ್ಯನಿಯಂತ್ರಣಾಧಿಕಾರಿಯಾಗಿರುತ್ತಾರೆ.

6. 2016-17ನೇ ಸಾಲಿಗೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಒಟ್ಟು ರೂ.15.00 ಕೋಟಿ ಅನುದಾನವನ್ನು ಆಯವ್ಯಯದ ಲೆಕ್ಕಶೀರ್ಷಿಕೆ (HOA) 2202-01-106-0-02 ಅಡಿಯಲ್ಲಿ ಒದಗಿಸಲಾಗಿದೆ. ಅನುಮೋದಿತವಾದ ಕೆಲವು ಚಟುವಟಿಕೆಗಳಿಗೆ ಸರ್ವ ಶಿಕ್ಷಣ ಅಭಿಯಾನದಡಿಯಡಿಯಲ್ಲಿ ಅನುದಾನ ಒದಗಿಸಬಹುದಾಗಿದೆ. ಈ ಶೀರ್ಷಿಕೆಯಡಿಯಲ್ಲಿ ಒದಗಿಸಿದ ಅನುದಾನವನ್ನು ಉಪಯೋಗಿಸುವ ಮೊದಲು ಸರ್ವ ಶಿಕ್ಷಣ ಅಭಿಯಾನದ ಅನುದಾನ ಉಪಯೋಗಿಸುವುದು.

7. ಮುಂದಿನ ವರ್ಷಗಳಲ್ಲಿ, ಲಭ್ಯವಿರುವ ಅನುದಾನದ ಆಧಾರದ ಮೇಲೆ ಚಟುವಟಿಕೆಗಳ ಅನುಷ್ಠಾನ ಹಾಗೂ ಅನುದಾನ ಮಂಜೂರಾತಿಗಾಗಿ ಅನುಮೋದನೆ ನೀಡಲಾಗುವುದು.

8. ಸದರಿ ಚಟುವಟಿಕೆಗಳ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ಹಾಗೂ ಸರ್ಕಾರದ ಇತರೆ ನಿಯಮಗಳ ಪ್ರಕಾರ ಭರಿಸುವುದು.

9. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 396 ವೆಚ್ಚ-8/2016 ದಿನಾಂಕ: 28.06.2016ರಲ್ಲಿ ನೀಡಿರುವ ಸಹಮತಿಯ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಪರ್ಣಾ ಪಾವಟೆ)
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಉಪ ಕಾರ್ಯದರ್ಶಿ(ಯೋಜನೆ)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

**ಪ್ರತಿ:**

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರರವರ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಕಾರ್ಯದರ್ಶಿಯವರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
6. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

7. ರಾಜ್ಯಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
8. ಅಪರಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಕಲಬುರಗಿ.
9. ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
10. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತುಇತರೆಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು& ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಕ್ಯುಎಎಸಿ, ಬೆಂಗಳೂರು
12. ಜಂಟಿ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಬೆಂಗಳೂರು
14. ಉಪ ನಿರ್ದೇಶಕರು, ಖಜಾನಾಗಣಕಕೇಂದ್ರ, #49, ಖನಿಜ ಭವನ, ಬೆಂಗಳೂರು
15. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
16. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
17. ಕಛೇರಿ ಪ್ರತಿ

**ಸರ್ಕಾರದ ಆದೇಶ ಸಂಖ್ಯೆ : ಇಡಿ 78 ಮಾಹಿತಿ 2016 ದಿನಾಂಕ: 4.08.2016ಕ್ಕೆ ಅನುಬಂಧ**

**1. (KSQAAC) ನ ಕಾರ್ಯವನ್ನು ಸಂಸ್ಕರಿಸುವುದು :**

ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಾಂಕನ ಅಂಗೀಕರಣ ಪರಿಷತ್ತಿನ(KSQAAC) ಕಾರ್ಯವನ್ನು ಇತ್ತೀಚಿನ ನೈದಾನಿಕ ಅಧ್ಯಯನವನ್ನು ಆಧರಿಸಿ ಸಂಸ್ಕರಿಸುವುದು. ಮೌಲ್ಯಮಾಪನಗಳನ್ನು ಎತ್ತಿಹಿಡಿಯುವ ಸಲುವಾಗಿ ಮಾನ್ಯತಾ ಕಾರ್ಯವನ್ನು ಕೈಬಿಡುವುದು. ಶಾಲಾ ಕೇಂದ್ರಿತ ಮೌಲ್ಯಮಾಪನದ ಬದಲಾಗಿ ಪ್ರತಿಯೊಂದು ಜಿಲ್ಲೆ ಅಥವಾ ಕ್ಷೇತ್ರಗಳಲ್ಲಿ ಕೈಗೊಂಡ ಸಾಧನೆಗಳ ಹಾಗೂ ಪ್ರಕ್ರಿಯೆಗಳನ್ನು ಆಧರಿಸಿ ಅನುಷ್ಠಾನಗೊಳಿಸಬಲ್ಲ ಒಳಹರಿವುಗಳನ್ನು ಹಾಗೂ ಪರಿಹಾರಾತ್ಮಕ ಕ್ರಮಗಳ ಬಗ್ಗೆ ಪರಿಷತ್ತು ಆದೇಶಿಸತಕ್ಕದ್ದು.

ಶಿಸ್ತುಬದ್ಧವಾದ ಪ್ರಕ್ರಿಯೆಯ ಅಂಶಗಳನ್ನು ಮತ್ತು ಅದಕ್ಕೆ ಸೂಕ್ತವಾದ ಅನುಪಾಲನಾ ಚಟುವಟಿಕೆಗಳನ್ನು ಕೂಡ ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಾಂಕನ ಅಂಗೀಕರಣ ಪರಿಷತ್ತಿನ(KSQAAC) ಆದೇಶದಲ್ಲಿ ಸೇರಿಸಿಕೊಳ್ಳುವುದು. ಪರಿಷತ್ತಿಗೆ ಹೆಚ್ಚಿನ ಮಾನವ ಸಂಪನ್ಮೂಲದ ಅವಶ್ಯಕತೆಯಿದ್ದು, ಅದನ್ನು ಸಲಹಾ ಸೇವೆಗಳ ಮೂಲಕ ಪಡೆಯತಕ್ಕದ್ದು.

**2016–17ನೇ ಸಾಲಿಗೆ ನಿಗದಿಗೊಳಿಸಲಾದ ಅನುದಾನ: ರೂ.6.00 ಕೋಟಿ.**

**ಅನುಷ್ಠಾನದ ಜವಾಬ್ದಾರಿ:** ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಈ ಚಟುವಟಿಕೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**2. ರಾಜ್ಯ ಸಾಧನಾ ಸಮೀಕ್ಷೆ (ಎಸ್.ಎ.ಎಸ್):**

ಎನ್.ಸಿ.ಇ.ಆರ್.ಟಿ ಹಾಗೂ ಪ್ರಥಮ್ (PRATHAM) ನ ಸಹಯೋಗದೊಂದಿಗೆ ರಾಜ್ಯ ಸಾಧನಾ ಸಮೀಕ್ಷೆಯನ್ನು ಮಾದರಿ ಆಧಾರಿತವಾಗಿ 3, 5 ಹಾಗೂ 8ನೇ ತರಗತಿಗಳಿಗೆ ಕೈಗೊಳ್ಳಲಾಗುವುದು. ಒಂದು ತರಗತಿಗೆ ಸಮೀಕ್ಷೆ ಕೈಗೊಳ್ಳುವ ಮೂಲಕ ಶಿಕ್ಷಕರ ತರಬೇತಿ ವಿಷಯಗಳಲ್ಲಿ ಸುಧಾರಣೆ ಮತ್ತು ವರ್ಗಕೋಣೆಯಲ್ಲಿನ ಶಿಕ್ಷಕರು ಕೈಗೊಳ್ಳುತ್ತಿರುವ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನವನ್ನು ಊರ್ಜಿತಗೊಳಿಸುವ ಸಲುವಾಗಿ ಪ್ರತಿ ವರ್ಷ ರಾಜ್ಯ ಸಾಧನಾ ಸಮೀಕ್ಷೆಯನ್ನು ಕೈಗೊಳ್ಳುವುದು. ಸಮೀಕ್ಷೆಯ ನಂತರ 2 ಮತ್ತು 3ನೆ ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಬಹುದಾದ ಸುಧಾರಣೆಗಳನ್ನು ಅನುಷ್ಠಾನಗೊಳಿಸಿ, ಕ್ರಿಯೆಯ ಒಳನೋಟಗಳನ್ನು ನಾಲ್ಕನೇ ವರ್ಷದಲ್ಲಿ ಈಗಾಗಲೇ ಸಮೀಕ್ಷೆಗಳಪಟ್ಟ ತರಗತಿಯನ್ನು ಮತ್ತೊಮ್ಮೆ ಸಮೀಕ್ಷೆಗೆ ಒಳಪಡಿಸುವುದು.

**2016–17ನೇ ಸಾಲಿಗೆ ನಿಗದಿಗೊಳಿಸಲಾದ ಅನುದಾನ: ರೂ.3.00 ಕೋಟಿ.**

**ಅನುಷ್ಠಾನದ ಜವಾಬ್ದಾರಿ:** ರಾಜ್ಯ ಸಾಧನಾ ಸಮೀಕ್ಷೆಯನ್ನು ಆಯೋಜಿಸುವ ಜವಾಬ್ದಾರಿಯು ಕೆ.ಎಸ್.ಕ್ಯೂ.ಎ.ಎ.ಸಿ.ಯದ್ದಾಗಿದೆ.

**3. ವಿದ್ಯಾರ್ಥಿಗಳ ಸಾಧನೆಯ ಬಾಹ್ಯ ಮೌಲ್ಯಮಾಪನ:**

4 ಮತ್ತು 5ನೇ ತರಗತಿಯಲ್ಲಿ ಓದುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಕಲಿತಾ ಸಾಧನೆಗಳ ಬಾಹ್ಯ ಮೌಲ್ಯಮಾಪನವನ್ನು ಕೈಗೊಳ್ಳುವುದು. ಈ ಮೌಲ್ಯಮಾಪನವು ಮಾದರಿ ಆಧಾರಿತ ಮೌಲ್ಯಮಾಪನವಾದ ರಾಜ್ಯ ಸಾಧನಾ ಸಮೀಕ್ಷೆಗಿಂತ ಭಿನ್ನವಾಗಿದೆ. ತರಗತಿ ಶಿಕ್ಷಕರು ಪ್ರತಿಯೊಂದು ವಿದ್ಯಾರ್ಥಿಗೆ ಆಂತರಿಕವಾಗಿ ಕೈಗೊಳ್ಳುವ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಊರ್ಜಿತಗೊಳಿಸುವುದು ಈ ಬಾಹ್ಯ ಮೌಲ್ಯಮಾಪನದ ಉದ್ದೇಶವಾಗಿದೆ. ಸಾಧನೆಯಲ್ಲಿ ದುರ್ಬಲ ವಿದ್ಯಾರ್ಥಿಗಳನ್ನು ಗುರುತಿಸುವ ಮೂಲಕ ಬೇಸಿಗೆ ಹಾಗೂ ಇತರೆ ರಜಾ ದಿನಗಳಲ್ಲಿ ಪೂರಕ ಬೋಧನೆಯನ್ನು ಕೈಗೊಳ್ಳುವುದು. ಪೂರಕ ಬೋಧನಾ ಚಟುವಟಿಕೆಯನ್ನು ಶೈಕ್ಷಣಿಕ ಗುಣಮಟ್ಟ ಸುಧಾರಣಾ ಕಾರ್ಯಕ್ರಮದ ಭಾಗವಾಗಿ ಅನುಮೋದಿಸಿದೆ.

**2016-17ನೇ ಸಾಲಿಗೆ ನಿಗದಿಗೊಳಿಸಲಾದ ಅನುದಾನ: ರೂ.4.00 ಕೋಟಿ.**

**ಅನುಷ್ಠಾನದ ಜವಾಬ್ದಾರಿ:** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮೇಲ್ವಿಚಾರಣೆಯಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ (KSEEB) ನಿರ್ದೇಶಕರು ಈ ಚಟುವಟಿಕೆಯ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ.

**4. ಪ್ರಕ್ರಿಯೆಗಳಿಗೆ ಗುಣಮಟ್ಟದ ಭರವಸೆ:**

1 ಮತ್ತು 3ನೇ ತರಗತಿಗಳಿಗೆ ಬಳಸುತ್ತಿರುವ ಚಟುವಟಿಕೆ ಆಧಾರಿತ ಕಲಿಕಾ ವಿಧಾನವಾದ ನಲಿ-ಕಲಿಯ ಗುಣಮಟ್ಟ ಭರವಸೆ ವ್ಯವಸ್ಥೆಯನ್ನು 2016-17ನೇ ಶೈಕ್ಷಣಿಕ ವರ್ಷದಲ್ಲಿ ಸ್ಥಾಪಿಸುವುದು. ಮಧ್ಯಾಹ್ನ ಉಪಹಾರ ಯೋಜನಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿಸಲು ಹೆಚ್ಚಿನ ಸಂಖ್ಯೆಯ ಮಾದರಿಗಳನ್ನು ಬಳಸಿ ವ್ಯವಸ್ಥೆಯ ಪರಿಹಾರಾತ್ಮಕ ಉಪಕ್ರಮಗಳನ್ನು ಎಲ್ಲಾ ಹಂತದ ಆಡಳಿತದಲ್ಲಿ-ಜಿಲ್ಲಾ / ಬ್ಲಾಕ್, ಶಾಲೆಗಳಲ್ಲಿ ಮಾದರಿ ತಂತ್ರಾಧಾರಿತ ಗುಣಮಟ್ಟ ಖಾತ್ರಿಪಡಿಸಿಕೊಳ್ಳುವ ವ್ಯವಸ್ಥೆಯನ್ನು ಸ್ಥಾಪಿಸುವುದು. ಯಾವುದೇ ಶೈಕ್ಷಣಿಕ ಜಿಲ್ಲೆ ಅಥವಾ ಬ್ಲಾಕ್‌ಗಳ ಪ್ರಮಾಣಿತ ಶಿಫಾರಸ್ಸುಗಳಿಗೆ ಹೊರತಾಗಿ ಒಪ್ಪಲಾಗದ ವ್ಯತ್ಯಾಸಗಳು ಸಮೀಕ್ಷೆಯಿಂದ ಕಂಡು ಬಂದಲ್ಲಿ ಅಂತಹ ವ್ಯತ್ಯಾಸಗಳನ್ನು ತೆರವುಗೊಳಿಸಲು ಕ್ರಮವಹಿಸುವುದು. ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಲ್ಲಿ ಕೆಲವು ಸ್ವೀಕೃತವಾದ ದೂರುಗಳು ಅಥವಾ ಸಂಭವಿಸಿದ ಅಹಿತಕರ ಘಟನೆಗೆ ಕೈಗೊಳ್ಳುವ ವ್ಯವಸ್ಥೆ ಮಾತ್ರವಿದ್ದು, ಪ್ರಸ್ತಾಪಿತ ವ್ಯವಸ್ಥೆಯನ್ನು

ಉತ್ತಮಗೊಳಿಸಲು ನಿರೀಕ್ಷಿಸಲಾಗಿದೆ. ಇಂತಹ ಗುಣಾತ್ಮಕ ಆಶ್ವಾಸನೆಗಳನ್ನು ಅಳವಡಿಸಲು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ನೆರವನ್ನು ಪಡೆದುಕೊಳ್ಳುವುದು.

ಅಲ್ಲಿಯವರೆಗೆ, ಪ್ರಕ್ರಿಯೆಗಳ ಗುಣಮಟ್ಟದ ವ್ಯವಸ್ಥೆಯನ್ನು ಕೆ.ಎಸ್.ಕ್ಯೂ.ಎ.ಎ.ಸಿ.ಯಲ್ಲಿಯೇ ಸ್ಥಾಪಿಸುವುದು. ಅನುಷ್ಠಾನದ ಜವಾಬ್ದಾರಿ ಹೊಂದಿರುವ ಆಡಳಿತ ಘಟಕಗಳು ಸಮರ್ಪಕವಾದ ಸಾಮರ್ಥ್ಯ ಹೊಂದಿ ಪುನರ್ ರಚನೆಯಾದ ನಂತರ, ಅವುಗಳು ಸ್ವತಂತ್ರವಾಗಿ ತಮ್ಮ ಪ್ರಕ್ರಿಯೆಗಳ ಗುಣಾತ್ಮಕ ಹಿಮ್ಮಾಹಿತಿಯನ್ನು ಪಡೆಯುವಂತಾಗಬೇಕು.

**2016-17ನೇ ಸಾಲಿಗೆ ನಿಗದಿಗೊಳಿಸಲಾದ ಅನುದಾನ: ರೂ.2.00 ಕೋಟಿ.**

**ಅನುಷ್ಠಾನದ ಜವಾಬ್ದಾರಿ:** ಸದರಿ ವ್ಯವಸ್ಥೆಗಳನ್ನು ಸ್ಥಾಪಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಇವರುಗಳ ಸಂಪೂರ್ಣ ಮೇಲ್ವಿಚಾರಣೆಯಲ್ಲಿ ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ ಮತ್ತು ಸಹನಿರ್ದೇಶಕರು, ಮಧ್ಯಾಹ್ನ ಬಿಸಿಯೂಟ ಯೋಜನೆ ಇವರುಗಳು ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮಧ್ಯಂತರದಲ್ಲಿ ನಡೆಯುತ್ತಿರುವ ಇಂತಹ ವ್ಯವಸ್ಥೆಗಳನ್ನು ಕೆ.ಎಸ್.ಕ್ಯೂ.ಎ.ಎ.ಸಿ ನಡೆಸಿಕೊಡುವುದು.

4/8

**(ಅಪರ್ಣಾ ಪಾವಟೆ)**
**ಅಂತರಿಕ ಆರ್ಥಿಕ ಸಲಹೆಗಾರರು ಹಾಗೂ**
**ಉಪ ಕಾರ್ಯದರ್ಶಿ (ಯೋಜನೆ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.**